ದಿನಾಂಕಃ 04.09.2025

ಅಸಲುದಾವಃ 219/2022

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನನ್ನ ಮಾವನ ಹೆಸರು ಮಂಚಯ್ಯ. ಅವರ ತಂದೆಯ ಹೆಸರು ಹೊಂಬಾಳೆ ಕರಿಯಯ್ಯ. ನೀವು ಇತ್ತೀಚಿನ ಆರ್.ಟಿ.ಸಿಗಳನ್ನು ಹಾಜರು ಪಡಿಸಿದ್ದೀರಿ ಹಳೆಯ ಆರ್.ಟಿ.ಸಿಗಳನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಏನು ಇಲ್ಲ ಎಂದು ಉತ್ತರಿಸುತ್ತಾರೆ. 4(1) ಮತ್ತು 6(1) ನೋಟೀಫಿಕೇಷನ್ ಆದ ಬಗ್ಗೆ ನನಗೆ ಗೊತ್ತು. ಮುತ್ತುರಾಯನ ಕೆರೆ ಚಾನಲ್‌ಗಾಗಿ ನಿಮ್ಮ ಊರಿನ ಎಲ್ಲಾ ಜಮೀನುಗಳಿಗೆ ಒಟ್ಟಿಗೆ 4(1) ಮತ್ತು 6(1) ನೋಟೀಫಿಕೇಷನ್ ಮಾಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಜಮೀನುಗಳಿಗೆ ಬೇರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಜಮೀನಿನ 4(1) ಮತ್ತು 6(1) ನೋಟೀಫಿಕೇಷನ್ ತಂದು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಏನು ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮುತ್ತುರಾಯನ ಕೆರೆ ಚಾನಲ್‌ಗಾಗಿ ಸರ್ಕಾರದಿಂದ ಆದ 4(1) ಮತ್ತು 6(1) ನೋಟೀಫಿಕೇಷನ್ ಈಗ ತೋರಿಸಿದ ನಿಪಿ14 ಮತ್ತು 15 ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಜಮೀನು ಭೂ ಸ್ವಾಧೀನವಾದ ಬಳಿಕ ಅರ್ವಾಡ್ ನೋಟೀಸ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನು ಆತಗೂರಿನಲ್ಲಿ ಇದ್ದೆವು, ನನಗೆ ಗೊತ್ತಿಲ್ಲ, ನಮ್ಮ ಅತ್ತೆಗೆ ಕೊಟ್ಟಿದ್ದಾರೆ, ಆದರೆ ನಮ್ಮ ಅತ್ತೆಗೆ ಏನೂ ತಿಳಿಯುವುದಿಲ್ಲ, ಅವರಿಗೆ ವಯಸ್ಸಾಗಿದೆ, ವಾದಿ ಮಧುರವರೇ ನನ್ನ ಅತ್ತೆಯನ್ನು ಅವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಒಂದು ಸಹಿ ಹಾಕಿಸಿಕೊಂಡು ನಂತರ ನಾಲ್ಕೈದು ಸಹಿ ಫೋರ್ಜರಿ ಮಾಡಿಕೊಂಡು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಮೊದಲು ಅವಾರ್ಡ್ ಆದಾಗ ಯಾರ ಹೆಸರಿನಲ್ಲಿ ಜಮೀನು ಇತ್ತೊ ಅವರು ಅವಾರ್ಡ್ ಮೊತ್ತವನ್ನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ಹಣ ತೆಗೆದುಕೊಳ್ಳುವ ಸಮಯದಲ್ಲಿ ನೀವೇನಾದರು ಹೋಗಿದ್ದೀರಾ ಎಂದರೆ ಸಾಕ್ಷಿ ನಮ್ಮನ್ನು ಕರೆಯಲೇ ಇಲ್ಲ ಎಂದು ಉತ್ತರಿಸುತ್ತಾರೆ. ಆಗ ಯಾರು ಯಾರು ಎಷ್ಟೆಷ್ಟು ಹಣ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಅವಾರ್ಡ್ ಹಣ ಸರ್ಮಪಕವಾಗಿರುವುದಿಲ್ಲ ಅಧಿಕ ಹಣ ಅವಾರ್ಡ್ ಮಾಡಬೇಕು ಎಂದು ಮಂಡ್ಯದ

ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ಪ್ರಕರಣ ಜನತಾ ನ್ಯಾಯಾಲಯದಲ್ಲಿ ತೀರ್ಮಾನವಾಯಿತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಪ್ರಕರಣವನ್ನು ಮಂಚಯ್ಯ, ಹೊಂಬಾಳೆ, ದಡಿಯ ಮೂರು ಜನ ಸೇರಿ ಹಾಕಿದ್ದರು ಎಂದರು ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಂತರ ಆ ಕೇಸು ನಡೆಯುತ್ತಿರುವಾಗಲೇ ಆ ಮೂರೂ ಜನರು ತೀರಿಕೊಂಡರು ಎಂದರೆ ಸಾಕ್ಷಿ ಕೇಸು ನಡೆಯುವಾಗ ತೀರಿಕೊಳ್ಳಲಿಲ್ಲ, ಅದಕ್ಕೂ ಮೊದಲೇ ತೀರಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಆ ಪ್ರಕರಣದಲ್ಲಿ ಮಂಚಯ್ಯನ ವಾರಸುದಾರರಾಗಿ ಮರಿಲಿಂಗಮ್ಮ, ಜಯಮ್ಮ, ಕೃಷ್ಣ, ವಿನೋಧ ರವರನ್ನು ಸೇರಿಸಲಾಯಿತು ಎಂದರೆ ಸಾಕ್ಷಿ ಇಲ್ಲ, ಜಯಮ್ಮ, ಕಷ್ಣ, ರತ್ನಮ್ಮ, ಹೊಂಬಾಳಯ್ಯ ಅಲಿಯಾಸ್ ಅಪ್ಪಾಜಿ ಮತ್ತು ಸರೋಜಮ್ಮರವರನ್ನು ಸೇರಿಸಲಾಯಿತು ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರು ತೀರಿಕೊಂಡಿದ್ದರಿಂದ ನಿಮ್ಮನ್ನು ಅವರ ವಾರಸುದಾರರಾಗಿ ಆ ಪ್ರಕರಣದಲ್ಲಿ ಸೇರಿಸಲಾಯಿತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರ ಹೆಸರು ಅಪ್ಪಾಜಿ ಮಾತ್ರ ಅಲಿಯಾಸ್ ಹೊಂಬಾಳಯ್ಯ ಎಂದು ಇರುವುದಿಲ್ಲ ಎಂದರೆ ಸಾಕ್ಷಿ ಅವರು ವಿಧ್ಯಾಭ್ಯಾಸ ಮಾಡಿರುವ ಎಲ್ಲಾ ದಾಖಲಾತಿಗಳಲ್ಲಿ ಹೊಂಬಾಳಯ್ಯ ಎಂದೇ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ಮಾವ ಮಂಚಯ್ಯರವರನ್ನು ಮರಿಯಯ್ಯ ಎಂದೂ ಕರೆಯುತ್ತಿದ್ದರು ಎಂದರೆ ಸಾಕ್ಷಿ ಇಲ್ಲ, ಮಂಚಯ್ಯ ಎಂದು ಮಾತ್ರ ಕರೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಆ ಪ್ರಕರಣವದಲ್ಲಿ ಹೊಂಬಾಳಯ್ಯನವರು ತೀರಿಕೊಂಡ ಬಳಿಕ ಅವರ ವಾರಸುದಾರರಾಗಿ ಮಾಯಮ್ಮ, ಇಂದ್ರಮ್ಮ ಮತ್ತು ಮಧುಸೂದನ್ ರವರನ್ನು ಸೇರಿಸಲಾಯಿತು ಎಂದರೆ ಸಾಕ್ಷಿ ಇಲ್ಲ, ಅವರು ನಮ್ಮ ಕುಟುಂಬದವರೇ ಅಲ್ಲ ಎಂದು ಉತ್ತರಿಸುತ್ತಾರೆ. ದಡಿಯರವರು ತೀರಿಕೊಂಡ ಕಾರಣ ಅವರ ವಾರಸುದಾರರಾದ ಲಕ್ಷ್ಮಮ್ಮ, ಅನಿಲ್ ಕುಮಾರ್, ನಾರಾಯಾಣ ಮತ್ತು ಮೋಹನ್ ಅವರನ್ನು ಆ ಪ್ರಕರಣದಲ್ಲಿ ಸೇರಿಸಲಾಯಿತು ಎಂದರೆ ಸಾಕ್ಷಿ ಅವರು ಮತ್ತು ಮೋಹನ್ ಒಂದೇ ಕುಟುಂಬದವರು ಎಂದು ಉತ್ತರಿಸುತ್ತಾರೆ. ಎಲ್.ಎ.ಸಿ 9/2007 ರಲ್ಲಿ ರೂ.45 ಲಕ್ಷಗಳನ್ನು ಹೆಚ್ಚಾಗಿ ಅವಾರ್ಡ್ ಮಾಡಲಾಯಿತು ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಅವಾರ್ಡ್ ಆದೇಶದ ಜಾರಿಗಾಗಿ ನಿಮ್ಮ ಅತ್ತೆ ಜಾರಿ ಪ್ರಕರಣ ದಾಖಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಲ್ಲವನ್ನು ಮಧುಸೂದನ್ ಅವರೇ ಮಾಡಿದ್ದರು ಎಂದು ಉತ್ತರಿಸುತ್ತಾರೆ. ಅಧಿಕ ಅವಾರ್ಡ್ ಹಣ ಕೋರಿ ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣ

ದಾಖಲಿಸುವುದರಿಂದ ಜಾರಿ ಪ್ರಕರಣ ದಾಖಲಿಸುವವರೆಗು ಎಲ್ಲವನ್ನು ನಿಮ್ಮ ಅತ್ತೆ ಮಧುಸೂದನ್ ಅವರ ಕೈಯಲ್ಲಿಯೇ ಮಾಡಿಸುತ್ತಿದ್ದರು ಎಂದರೆ ಸಾಕ್ಷಿ ನನ್ನ ಯಜಮಾನರು ತೀರಿಕೊಳ್ಳುವ ವಿಚಾರ ನನ್ನ ಯಜಮಾನರಿಗೆ ಗೊತ್ತಿತ್ತು ಹಾಗಾಗಿ ಎಲ್ಲವನ್ನು ರೆಡಿ ಮಾಡಿಸಿ ಮಧುಸೂದನ್ ಅವರಿಗೆ ನನ್ನ ಯಜಮಾನರು ನೋಡಿಕೊಳ್ಳುವಂತೆ ಹೇಳಿ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ದಿನಾಂಕ 01.09.2004 ರಲ್ಲಿಯೇ ನಿಮ್ಮ ಅತ್ತೆ, ಹೊಂಬಾಳಯ್ಯ, ಮರಿಯಯ್ಯ ಎಲ್ಲರೂ ಮಧುಸೂದನ್ ಅವರು ಹೆಚ್ಚುವರಿ ಹಣಕ್ಕೆ ಕೇಸು ಹಾಕುವ ಜವಾಬ್ದಾರಿಯನ್ನು ವಹಿಸುವಂತೆ ಸಹಿ ಮಾಡಿ ಅವರಿಗೆ ಅಧಿಕಾರ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮಂಚಯ್ಯ, ಹೊಂಬಾಳೆ ಮತ್ತು ದಡಿಯ ಎಲ್ಲಾರೂ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸರ್ಕಾರದಿಂದ ಭೂ ಸ್ವಾಧೀನವಾದ ಸರ್ವೆ ನಂ.98/3 ಮತ್ತು 98/4 ಈ ಸ್ವತ್ತುಗಳು ಮೇಲೆ ಹೇಳಿದ ಮಂಚಯ್ಯ, ಹೊಂಬಾಳೆ ಮತ್ತು ದಡಿಯ ಮೂರು ಜನರಿಗೆ ಸೇರಿದ ಪಿತ್ರಾರ್ಜಿತವಾದ ಒಟ್ಟು ಕುಟುಬಂದ ಆಸ್ತಿ ಎಂದರೆ ಸಾಕ್ಷಿ ಸುಳ್ಳು, ನನ್ನ ಅತ್ತೆಯ ಹೆಸರಿನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ಅತ್ತೆ, ಹೊಂಬಾಳಯ್ಯ ಮತ್ತು ದಡಿಯರವರ ಹೆಸರಿನಲ್ಲಿ ಜಂಟಿ ಖಾತೆ ಇತ್ತು ಎಂದರೆ ಸಾಕ್ಷಿ ಇಲ್ಲ ಅವರೇ ಜಂಟಿ ಖಾತೆ ಮಾಡಿಸಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಜಂಟಿ ಖಾತೆ ಮಾಡಿಸಿಕೊಂಡಿರುವ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನಮಗೆ ರೂ.38 ಲಕ್ಷ ಬಂದಾಗ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಮಧುಸೂದನ್ ಅವರು ನಿಮಗೆ ಮೋಸ ಮಾಡಿರುವುದಾಗಿ ಹೇಳಿದ್ದೀರಿ, ನೀವೇನಾದರು ಆ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಉತ್ತರಿಸುತ್ತಾರೆ. ಊರಿನಲ್ಲಿ ನ್ಯಾಯ ಪಂಚಾಯಿತಿ ಏನಾದರು ನಡೆಯಿತಾ ಎಂದರೆ ಸಾಕ್ಷಿ ಮಧುಸೂದನ್ ಅವರೇ ನಮ್ಮ ಮೇಲೆ ದೂರು ಕೊಟ್ಟಿದ್ದರು, ಆ ನಂತರ ಪಂಚಾಯಿತಿ ನಡೆಯಿತು ಎಂದು ಉತ್ತರಿಸುತ್ತಾರೆ. ಆ ಪಂಚಾಯಿತಿಯನ್ನು ಮಧುಸೂದನ್ ಅವರೇ ಸೇರಿಸಿದ್ದರು. ಮಧುಸೂದನ್ ಅವರೇ ಮುಂದೆ ನಿಂತು ಅವಾರ್ಡ್ ಮೊತ್ತವನ್ನು ಹೆಚ್ಚು ಕೋರಿ ಪ್ರಕರಣ ಸಲ್ಲಿಸಿ ಅವಾರ್ಡ್ ನಂತರ ಆ ಹಣವನ್ನು ಅಕೌಂಟಿಗೆ ಹಾಕಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ, ನಮ್ಮ ಯಜಮಾನರು ಜಮೀನಿನ ಎಲ್ಲಾ ದಾಖಲಾತಿಗಳನ್ನು ರೆಡಿ ಮಾಡಿಸಿ 2006 ರಲ್ಲಿ ಅವರು ತೀರಿಕೊಳ್ಳುವ ಮೊದಲೆ ಮಧುಸೂದನ್ ಅವರಿಗೆ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಮಂಡ್ಯದಲ್ಲಿ ಎಲ್.ಎ.ಸಿ ಪ್ರಕರಣ ದಾಖಲಿಸುವ ವೇಳೆ ಮಧುಸೂದನ್ ಅವರ ತಾಯಿಗೆ ಹುಷಾರಿರಲಿಲ್ಲ ಎಂದರೆ

ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮಧುಸೂದನ್ ಅವರ ತಾಯಿಗೆ ಹುಷಾರಿಲ್ಲದೇ ಇರುವ ಕಾರಣ ಮುಂದೆ ಹಣ ಹಂಚಿಕೊಳ್ಳುವಾಗ ತೊಂದರೆಯಾಗುವುದು ಬೇಡವೆಂದು ಮಧುಸೂದನ್ ಅವರಿಗೆ ಕೇಸು ನಡೆಸಲು ಅಧಿಕಾರ ಕೊಟ್ಟು ಮರಿಲಿಂಗಮ್ಮನವರ ಒಬ್ಬರ ಹೆಸರಿನಲ್ಲಿಯೇ ಕೇಸು ಹಾಕಿದ್ದರು ಎಂರದೆ ಸಾಕ್ಷಿ ಎಲ್ಲರೂ ಸೇರಿ ಅಲ್ಲ, ನನ್ನ ಅತ್ತೆ ಮರಿಲಿಂಗಮ್ಮನವರು ಮಾತ್ರ ಕೇಸು ಹಾಕಿದ್ದು ಎಂದು ಉತ್ತರಿಸುತ್ತಾರೆ. ಸದರಿ ಹಣ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೊಪ್ಪ ಶಾಖೆಯಲ್ಲಿ ಇರುವ ನಿಮ್ಮ ಅತ್ತೆಯ ಅಕೌಂಟಿಗೆ ಬಂತು ಎಂದರೆ ಸಾಕ್ಷಿ ಹೌದು, ಬಂತು ಅದರಲ್ಲಿ ರೂ.8 ಲಕ್ಷಗಳನ್ನು ಮಧುಸೂದನ್ ಅವರೇ ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಈಗ ತೋರಿಸಿದ ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೊಪ್ಪ ಶಾಖೆಯಲ್ಲಿ ಇರುವ ನನ್ನ ಅತ್ತೆಯ ಅಕೌಂಟಿಗೆ ಸೇರಿದ ಪಾಸ್ ಬುಕ್ ಎಂದರೆ ಸರಿ. ಸದರಿ ಪಾಸ್ ಬುಕ್ ಅನ್ನು ಸಾಕ್ಷಿ ಒಪ್ಪಿರುವ ಕಾರಣ ನಿಪಿ19 ಎಂದು ಗುರುತಿಸಲಾಯಿತು. ನಿಮ್ಮ ಅತ್ತೆ ಮಧುಸೂದನ್ ಅವರಿಗೆ ಜವಾಬ್ದಾರಿ ವಹಿಸಿದ್ದರಿಂದ ನಿಮ್ಮ ಅತ್ತೆಯವರೇ ಮಧುಸೂದನ್ ಅವರಿಗೆ ಪಾಸ್ ಬುಕ್ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮ್ಮ ಅತ್ತೆ ಕೊಟ್ಟಿಲ್ಲ, ಮಧುಸೂದನ್ ಅವರೇ ನಮ್ಮ ಮಾವನ ಕಡೆಯಿಂದ ಈಸಿಕೊಂಡು ಹೋಗಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಮಾವ ಯಾರು ಎಂದರೆ ಸಾಕ್ಷಿ ನನ್ನ ಯಜಮಾನರ ಅಣ್ಣ ಕೃಷ್ಣ ಎಂದು ಉತ್ತರಿಸುತ್ತಾರೆ. ಹಣ ಬಂದಿದೆ ಎಂದು ನಿಮಗೆ ಗೊತ್ತಾದ ನಂತರ ನೀವು ನಿಮ್ಮ ಅತ್ತೆಯವರನ್ನು ಕರೆದುಕೊಂಡು ಹೊಗಿ ಮಂಡ್ಯ ಶಾಖೆಯಲ್ಲಿ ಇರುವ ನಿಮ್ಮ ಅಕೌಂಟಿಗೆ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು, ಮಧುಸೂದನ್ ನನ್ನ ಅತ್ತೆಯವರಿಂದ ಸಹಿ ಮಾಡಿಸಿಕೊಂಡು ಹೋಗಿ ರೂ.8 ಲಕ್ಷ ಡ್ರಾ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಅಕೌಂಟಿನಿಂದ ನಿಮ್ಮ ಮಗನ ಅಕೌಂಟಿಗು ಸ್ವಲ್ಪ ಹಣ ವರ್ಗಾವಣೆ ಮಾಡಿದ್ದೀರಿ ಎಂದರೆ ಸಾಕ್ಷಿ ನಮ್ಮ ಅತ್ತೆಯವರು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಅತ್ತೆಯ ಜೊತೆಗೆ ಉಳಿದವರಿಗೂ ಸೇರಬೇಕಾಗಿದ್ದ ಹಣವನ್ನು ಅವರಿಗೆ ಕೊಡದಂತೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ನಿಮ್ಮ ಅಕೌಂಟಿಗೆ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ, ಯಾರಿಗೂ ನಾನು ಮೋಸ ಮಾಡಬೇಕೆಂದು ಮಾಡಿಸಿಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಮಧುಸೂದನ್ ನನಗೆ ಯಾವುದೇ ರೀತಿಯ ಸಂಬಂಧಿಕರಲ್ಲ. ಮಧುಸೂದನ್ ನಿಮ್ಮ ಸಂಬಂಧಿಕರಲ್ಲ ಎಂದು ಹೇಳುತ್ತೀರಿ ಹಾಗಾದರೆ ನಿಮ್ಮ ಅತ್ತೆ ಮತ್ತು

ನಿಮ್ಮ ಯಜಮಾನರು ಯಾವ ಕಾರಣಕ್ಕೆ ಮಧುಸೂದನ್ ಅವರಿಗೆ ಕೇಸು ನಡೆಸಲು ಸಹಿ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ಯಜಮಾನರು ತೀರಿಕೊಳ್ಳುವ ವಿಚಾರ ಗೊತ್ತಿದ್ದರಿಂದ ಊರಿನಲ್ಲಿ ಓದಿರುವವರು ಬೇರೆಯವರು ಯಾರು ಇರಲಿಲ್ಲ ಹಾಗಾಗಿ ಮಧುಸೂದನ್ ಅವರಿಗೆ ಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಆರ್.ಟಿ.ಸಿಯಲ್ಲಿ ಮರಿಲಿಂಗಮ್ಮ ಮತ್ತು ಹೊಂಬಾಳಯ್ಯ ಎಂದು ಜಂಟಿ ಇದ್ದ ಕಾರಣ ನಿಮ್ಮ ಗಂಡನ ಹೆಸರು ಹೊಂಬಾಳಯ್ಯ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಮಧುಸೂದನ್ ರೂ.8 ಲಕ್ಷಗಳನ್ನು ತೆಗೆದುಕೊಂಡರು ಎಂದು ಹೇಳಿದ್ದೀರಿ ಅದಕ್ಕೆ ಸಂಬಂಧಿಸಿದಂತೆ ದೂರನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ರೂ.8 ಲಕ್ಷ ವಸೂಲಿ ಮಾಡಲು ಅವರ ವಿರುದ್ದ ಏನೂ ಕ್ರಮ ಕೈಗೊಂಡಿರುವುದಿಲ್ಲ. ಹಕ್ಕುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.